**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ**

**ವಿಶೇಷ ಮೊಕದ್ದಮೆ ಸಂಖ್ಯೆಃ- 997/2021**

**ಪ್ರಾಸಾಃ- 11 ಚಾಸಾಃ- 19**

| | | |
|---|---|---|
| ಸಾಕ್ಷಿಯ ಹೆಸರು | : | ಅಮರಯ್ಯ ಗೌಡ |
| ತಂದೆಯ ಹೆಸರು | : | ನಾಗಪ್ಪ |
| ವಯಸ್ಸು | : | 35 ವರ್ಷ |
| ವೃತ್ತಿ | : | ಪಿ ಎಸ್ ಐ, ಹಚ್ಚೊಳ್ಳಿ ಠಾಣೆ, |
| ವಾಸಸ್ಥಳ | : | ಬಳ್ಳಾರಿ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 28.2.2026**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

ನಾನು ದಿಃ 12-7-2019 ರಿಂದ 9-9-2021 ರವರೆಗೆ ಸಿರಿಗೇರಿ ಪೋಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 12-8-2021 ರಂದು ಬಳ್ಳಾರಿ ವಿಮ್ಸ್ ಅಸ್ಪತ್ರೆಯಿಂದ ಚಾಸಾ 1 ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದ ಬಗ್ಗೆ ಎಂ ಎಲ್ ಸಿ ವರದಿ ಬಂದಿದ್ದರಿಂದ ನಾನು ಚಾಸಾ 12 ರವರನ್ನು ಆಸ್ಪತ್ರೆಗೆ ಭೇಟಿ ನೀಡಿ ಗಾಯಾಳುವಿನ ಹೇಳಿಕೆ ಪಡೆದುಕೊಳ್ಳಲು ತಿಳಿಸಿದ್ದೆ. ಅದರಂತೆ ಚಾಸಾ 12 ರವರು ಆಸ್ಪತ್ರೆಗೆ ಭೇಟಿ ನೀಡಿ ಚಾಸಾ 1 ರವರ ಹೇಳಿಕೆ ಫಿರ್ಯಾದನ್ನು ನಿಪಿ-1 ರಂತೆ ಪಡೆದು ನನ್ನ ಮುಂದೆ ಹಾಜರು ಪಡಿಸಿದ್ದರಿಂದ ನಾನು ಅದನ್ನು ಪಡೆದುಕೊಂಡು ಅದರ ಆಧಾರದ ಮೇಲೆ ನಮ್ಮ ಠಾಣಾ ಗುನ್ನಾ ಸಂಖ್ಯೆಃ 104/2021 ರಲ್ಲಿ ಪ್ರಕರಣ ದಾಖಲಿಸಿಕೊಂಡು ಮೂಲ ಎಫ್ ಐ ಆರ್ ನ್ನು ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿದ್ದೆ. ನಿಪಿ-1 ರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಎಫ್ ಐ ಆರ್ ನ್ನು ನಿಪಿ-16 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-16(ಎ) ಎಂದು ಗುರುತಿಸಲಾಯಿತು. ಕೇಸಿನ ಮುಂದಿನ ತನಿಖೆಯನ್ನು ಚಾಸಾ 20 ವರಿಗೆ ವಹಿಸಿಕೊಟ್ಟಿದ್ದೆ.

ದಿಃ 13-8-2021 ರಂದು ಚಾಸಾ 20 ರವರ ಆದೇಶದ ಮೇರೆಗೆ ನಾನು ಮತ್ತು ಇತರೇ ಸಿಬ್ಬಂದಿಗಳು ಈ ಪ್ರಕರಣದ 5 ನೇ ಆರೋಪಿಯನ್ನು

ಹೊಳೂರು ಗ್ರಾಮದಲ್ಲಿ ಹಿಡಿದು ಆತನನ್ನು ಚಾಸಾ 20 ರವರ ಮುಂದೆ ಹಾಜರುಪಡಿಸಿದ್ದೆ.

ದಿ: 14-8-2021 ರಂದು ಚಾಸಾ 20 ರವರ ಆದೇಶದ ಮೇರೆಗೆ ನಾನು ಮತ್ತು ಇತರೇ ಸಿಬ್ಬಂದಿಗಳು ಈ ಪ್ರಕರಣದ 6 ನೇ ಆರೋಪಿಯನ್ನು ಹೊಳೂರು ಗ್ರಾಮದಲ್ಲಿ ಹಿಡಿದು ಆತನನ್ನು ಚಾಸಾ 20 ರವರ ಮುಂದೆ ಹಾಜರುಪಡಿಸಿದ್ದೆ.

ದಿ: 25-8-2021 ರಂದು ಚಾಸಾ 20 ರವರ ಆದೇಶದ ಮೇರೆಗೆ ನಾನು ಮತ್ತು ಇತರೇ ಸಿಬ್ಬಂದಿಗಳು ಈ ಪ್ರಕರಣದ 1, 2 ಮತ್ತು 3 ನೇ ಆರೋಪಿತರನ್ನು ಕರೂರು ಗ್ರಾಮದಲ್ಲಿ ಹಿಡಿದು ಅವರನ್ನು ಚಾಸಾ 20 ರವರ ಮುಂದೆ ಹಾಜರುಪಡಿಸಿದ್ದೆ.

ಸಾಕ್ಷಿಯು ಆರೋಪಿ 1 ರಿಂದ 3, 5, 6 ರವರನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲು: ಆರೋಪಿತರ **ಪರ ಶ್ರೀ ಎಸ್ ಆರ್ ಎಸ್ ವಕೀಲರಿಂದ:**

ಸಿರಿಗೇರಿ ಮತ್ತು ಸಿರುಗುಪ್ಪಾ ದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಇವೆ ಎಂದರೆ ಸರಿ. ಯಾವ ಕಾರಣಕ್ಕೆ ಗಾಯಾಳುಗಳು ಬಳ್ಳಾರಿಯ ಆಸ್ಪತ್ರೆಗೆ ಬಂದಿದ್ದರು ಎಂದು ದೂರಿನಲ್ಲಿ ಹೇಳಿಲ್ಲ ಎಂದರೆ ಸರಿ. ಬಳ್ಳಾರಿಯಿಂದ ಸಿರುಗುಪ್ಪ 50 ಕಿ. ಮೀ. ದೂರ ಆಗುತ್ತದೆ. ನಿಪಿ-1 ರಲ್ಲಿ ವೈದ್ಯರ ಸಹಿ, ಸೀಲು ಹಾಗೂ ಗಾಯಾಳುವಿನ ಮಾನಸಿಕ ಸ್ಥಿತಿಯ ಬಗ್ಗೆ ನಮೂದು ಇಲ್ಲ ಎಂದರೆ ಸರಿ. ಆರೋಪಿತರಿಗೆ ಕಿರುಕುಳ ಕೊಡುವ ಉದ್ದೇಶದಿಂದ ಚಾಸಾ 1 ಸುಳ್ಳು ದೂರನ್ನು ಕೊಟ್ಟಿದ್ದು ಕಂಡು ಬಂದರೂ ಸಹ ನಾನು ಪಿರ್ಯಾದು ದಾರರ ಮಾತನ್ನು ಕೇಳಿಕೊಂಡು ಆರೋಪಿತರ ವಿರುದ್ದ ಸುಳ್ಳು ಪ್ರಕರಣ ದಾಖಲು ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಆರೋಪಿತರನ್ನು ಹಿಡಿದು ಚಾಸಾ 20 ರವರ ಮುಂದೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

ಓ. ಹೇ. ಕೆ. ಸರಿ ಇದೆ.

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**